The Mysore Press
Mysore

WE UNDERTAKE TO PRINT

JOBS BOOKS & PERIODICALS

Neat Workmanship Prompt Execution Moderate Charges

Printed and Published by B. S. Murthy, B. A., at the Mysore Press, Mysore, for the Editor and Proprietor.

SPACE FOR ADVERTISEMENTS

ಬಿಡಿ ಪ್ರತಿ ೩ ಪೈ.

ವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ) ರೂ. 1—8—0
೧ ವರ್ಷಕ್ಕೆ ಕಡಮೆ ಚಂದಾ ತೆಗೆದುಕೊಳ್ಳುವುದಿಲ್ಲ.
ವಿ ಪಿ. ಪದ್ಧತಿ ಇಲ್ಲ.
ಪ್ರಕಟಣೆ ದರವನ್ನು ಬೇಕಾದವರಿಗೆ ತಿಳಿಸುತ್ತೇವೆ.

Office—Chamaraja Agrahar, Mysore
ಆಫೀಸ್—ಚಾಮರಾಜ ಅಗ್ರಹಾರ ಮೈಸೂರು

Regd. No. M. 129

SATYAVADI

"ಸತ್ಯವಾದಿ" ವಾರಪತ್ರಿಕೆ

ಪ್ರತಿ ಶುಕ್ರವಾರವೂ ಪ್ರಕಟಿಸಲ್ಪಡುವುದು

"SATYAVADI"
OFFERS A
Profitable Medium
For Advertising
Space limited
Rates on enquiry

ಸಂಪುಟ ೭] ಮೈಸೂರು, ಶುಕ್ರವಾರ, ೮ ನೇ ಮೇ ೧೯೨೫ [ಸಂಚಿಕೆ ೨೦

೧೦೦೦ ರೂಪಾಯಿಗಳ ಬಹುಮಾನ
ಲೋಕಪ್ರಸಿದ್ಧವಾದ
ಸಾಲಾಮಿಸ್ರಿಮುರಬ್ಬ

ನಮ್ಮ ಟ್ರೇಡ್ ಮಾರ್ಕನ್ನು ನೋಡಿ ಈ ಔಷಧವನ್ನು ತೆಗೆದುಕೊಳ್ಳಿರಿ

ಇದರ ಸೇವನೆಯಿಂದ ವೀರ್ಯವು ನೀರಿನಂತಿದ್ದರೂ, ಸ್ವಪ್ನೇಂದ್ರಿಯವಾದರೂ ಸ್ತ್ರೀಸಂಗಕ್ಕೆ ಮೊದಲೆ ಸ್ಖಲನವಾದರು ಮೂತ್ರದೊಂದಿಗೆ ಹೊಗುತ್ತಿದ್ದರೂ, ದೋಷರ ಹಿತವಾಗಿ ಶರೀರಕ್ಕೆ ದಾರ್ಢ್ಯವನ್ನೂ ಆರೋಗ್ಯವನ್ನೂ ಉಂಟುಮಾಡುವದು. ಅಜೀರ್ಣ, ಮಲಬದ್ಧತೆ, ಮೆದುಳಿನ ಬಲಹೀನತೆ, ಕೈಕಾಲು ಸೊಂಟ ನೋವ್ಗಳಿಗೆ ಇದು ದಿವ್ಯ ಔಷಧವು. ಈ 'ಸಾಲಾಮಿಸ್ರಿ' ಎಂಬುವುದು ಕಾಬೂಲ್ ಕಾಂದಹಾರ್ ಪ್ರಾಂತ್ಯಗಳಲ್ಲಿ ಬೆಳೆಯುತ್ತದೆ. ಈ ಔಷಧದಿಂದ ಗುಣಹೊಂದಿದ ಅನೇಕ ಮಹನೀಯರು ತಾವಾಗಿಯೇ ಅನೇಕ ದೇಶಗಳಿಂದಲೂ, ಆಫ್ರಿಕ, ಬರ್ಮ, ಪೀನಾಂಗ್, ಸಿಲೋನ್ ಮತ್ತು ಇಂಡಿಯಾ ದೇಶದ ಎಲ್ಲಾ ಸ್ಥಳಗಳಿಂದಲೂ ನಮಗೆ ಯೋಗ್ಯತಾಪತ್ರಿಕೆಗಳನ್ನು ಕಳುಹಿಸಿರುವರು. ಇವುಗಳ ನಕಲನ್ನು ಯಾರುಬೇಕಾದರೂ ತರಿಸಿ ನೋಡಬಹುದು. ಇವುಗಳು ಸುಳ್ಳು ಎಂದು ನಿರ್ಧರಪಡಿಸುವವರಿಗೆ ಮೇಲೆ ಕಂಡ ಬಹುಮಾನವು ಕೊಡಲ್ಪಡುತ್ತೆ. ನಾವು ಹಾಗೆ ಕೊಡದೆ ನಿರಾಕರಿಸಿದಲ್ಲಿ ಕೋರ್ಟು ಮೂಲಕ ಅದನ್ನು ಪಡೆಯಬಹುದು. 1 ಡಬ್ಬವನ್ನು 15 ದಿವಸ ಸೇವಿಸಿದಲ್ಲಿ ಗುಣವು ಖಂಡಿತವಾಗಿ ತೋರಬಹುದು. 2 ಯಾ 3 ಡಬ್ಬಗಳು ಪೂರ್ಣವಾಗಿ ಗುಣವನ್ನುಂಟುಮಾಡುವುವು. ಅನುಪಾನ ಪತ್ರಿಕೆಯು ಡಬ್ಬಿ ಸಂಗಡಲೇ ಇರುತ್ತೆ. ಹೆಸರು ವಿಳಾಸ ಚೆನ್ನಾಗಿ ತಿಳಿಯುವಂತೆ ಇರಬೇಕು.

ಕ್ರಯ ಡಬ್ಬಿ 1 ಕ್ಕೆ ರೂ. 2—0—0.

ಪೋಸ್ಟಲು ಖರ್ಚು 1 ರಿಂದ 3 ಡಬ್ಬಿಗಳಿಗೆ 8
ಏಜಂಟರು ಎಲ್ಲಾ ಸ್ಥಳಗಳಲ್ಲಿಯೂ ಬೇಕಾಗಿರುತ್ತೆ. ರೂಲ್ಸ್ ತರಿಸಿಕೊಳ್ಳಬಹುದು.

ವಿಳಾಸ್—ಮಿಸ್ರಿ, ಬೆಂಗಳೂರು ಸಿಟಿ.

ಸೆ—ಡಿ. ಮನ್ನಾಲಾಲ್, ಡೆಲ್ಲಿ ವೈದ್ಯರು,
ಸಾಲಾಮಿಸ್ರಿ ಮುರಬ್ಬಾ ಡಿಪೊ,
ಬೆಂಗಳೂರು ಸಿಟಿ.

ಸೀಮೆ ಭಂಗಾತದ ರೇಡಿಯಂ ರಿಸ್ಟ್‌ವಾಚ್



ಚಿತ್ರದಲ್ಲಿ ಕಾಣುವಂತೆಯೇ ಇರುವ ಈ ಗಡಿಯಾರಗಳು ಹೊಸದಾಗಿ ಬಂದಿವೆ. ಈ ಗಡಿಯಾರದ ಕಾಂಪೊಸಿಷನ್‌ಗಳು ಬಹು ಒಳ್ಳೆಯವು. ಮತ್ತು ಬಲಿಷ್ಟವಾದವು. ವ್ಯತ್ಯಾಸವಿಲ್ಲದೆ ಕಾಲವನ್ನು ತೋರಿಸುವುದು. ಒಂದು ವೇಳೆ ಹಿಂದು ಮುಂದು ಹೋದರೂ ನಾವೇ ಸರಿಮಾಡಿಕೊಳ್ಳಬಹುದು. ಈ ಗಡಿಯಾರಗಳು ಸ್ವಿಡ್ಜರ್‌ಲ್ಯಾಂಡು ದೇಶದಲ್ಲಿ ತಯಾರಾಹುವು. ಇತರ ಗಡಿಯಾರಗಳಲ್ಲಿ ರಾತ್ರಿ ವೇಳೆಯಲ್ಲಿ ಗಂಟೆ ನೋಡಬೇಕಾದರೆ ಬೆಳಕು ಬೇಕು. ಈ ಗಡಿಯಾರಗಳಲ್ಲಿ ರಾತ್ರಿ ವೇಳೆಯಲ್ಲಿ ಗಂಟೆ ನೋಡಬೇಕಾದರೆ ಬೆಳಕು ಅವಶ್ಯಕವಿಲ್ಲ. ಎಷ್ಟು ಕತ್ತಲೆಯಾಗಿರುತ್ತೋ ಅಷ್ಟು ಚೆನ್ನಾಗಿ ಸೂರ್ಯನಂತೆ ಪ್ರಕಾಶವಾಗಿ ಗಂಟೆ ತೋರಿಸುವುದು. ಹಗಲು ವೇಳೆಯಲ್ಲಿ ಸಾಧಾರಣ ಗಡಿಯಾರಗಳಂತೆ ಇರುವುದು.

ಕ್ರಯ ಗಡಿಯಾರ 1 ಕ್ಕೆ ರೂ. 7—8—0
ಬೆಳ್ಳಿ ಗಡಿಯಾರ 1 ಕ್ಕೆ ರೂ. 9—0—0

ವಿಳಾಸ:—ಗೌರಿ ಅಂಡ್ ಕೋ.,
ನಂ. 39 ಪರಮಾನಂದ ಮೊದಲಿ ಬೀದಿ.
ಮಿಂಟ್ ಪೋಸ್ಟು, ಮದರಾಸ್.

ಹೊಸಮಾದರಿಯ ಊದಬತ್ತಿಗಳು

ಉತ್ತಮವಾದ ಮೂಲಿಕೆಗಳಿಂದಲೂ ಅತ್ತರು ಮೊದಲಾದ ಸಾರಗಳಿಂದಲೂ ಒಡಗೂಡಿ ದೇವತಾ ಪೂಜ್ಯಕ್ಕೆ ಯೋಗ್ಯವಾದ 'ದಶಾಂಗಬತ್ತಿ' ಎಂಬುದಾಗಿ ಪ್ರಸಿದ್ಧಿಹೊಂದಿರುವ ಹೊಸರೀತಿಯ ಊದುಬತ್ತಿಗಳು ನಮ್ಮಲ್ಲಿ ತಯಾರಾಗಿ ಬಿಕರಿಗೆ ಸಿದ್ಧವಾಗಿವೆ ಕ್ರಯ ಸೇರು ೧ ಕ್ಕೆ (ಸುಮಾರು ೬೦೦ ಬತ್ತಿಗಳು) ೩ ರೂಪಾಯಿ ಮಾತ್ರ. ಸರ್ವರೂ ತರಿಸಿ ತನ್ಮೂಲಕ ನಮ್ಮ ಶ್ರಮವನ್ನು ಸಾರ್ಥಕಗೊಳಿಸಬೇಕಾಗಿ ಪ್ರಾರ್ಥನೆ. ನಮ್ಮಲ್ಲಿ ಇನ್ನೂ ಇತರ ವಿಧವಾದ ಹೆಬ್ಬಿನ ಬೆಲೆಯ ಅಂಬರ್ ಕಸ್ತೂರಿಬತ್ತಿಗಳೂ, ಗಂಧದಬಿಲ್ಲೆ ಅರಗಜ, ಪನ್ನೀರು ವಗೈರೆ ಸಹಾ ದೊರೆಯುತ್ತೆ.

ಇದಲ್ಲದೆ ಸಂಜನಗೂಡಿನ ಮಿ|| ಬಿ.ವಿ. ಪಂಡಿತರ ಲೋಕಪ್ರಸಿದ್ಧವಾದ ಸಿದ್ಧೌಷಧಗಳೂ, ಷರಬತ್ತುಗಳೂ, ತೈಲಗಳೂ, ಲೇಹ್ಯಗಳೂ ನಮ್ಮಲ್ಲಿ ಸಿಕ್ಕುತ್ತೆ.

ಸಿ. ಪದ್ಮಯ್ಯ, ಕಮರ್ಷಿಯಲ್ ಹಾಲ್,
ಸಂತೇಪೇಟೆ, ಮೈಸೂರು.

ಸತ್ಯವಾದಿ ಪ್ರೆಸ್ ಮೈಸೂರು

—೦—

ನಾವು ಎಲ್ಲಾ ವಿಧವಾದ ಮುದ್ರಣ ಕೆಲಸವನ್ನು ಸುಲಭ ದರದಿಂದಲೂ, ಸೊಗಸಾಗಿಯೂ, ಸಕಾಲದಲ್ಲಿಯೂ ಮಾಡಿಕೊಡುತ್ತೇವೆ.

MYSORE GOVERNMENT
LOAN BONDS
&
Shares of Prominent
Companies
BOUGHT & SOLD
For particulars apply to:—
THE SEMAH ELISHA COMPANY
MYSORE.

ಮೈಸೂರು ಸರ್ಕಾರಿ ಸಾಲದ ಪತ್ರ
ಮತ್ತು ಕಂಪೆನಿ ಷೇರುಗಳನ್ನು
ಕೊಂಡುಕೊಳ್ಳುತ್ತೇವೆ
ಮತ್ತು
ಬಿಕರಿ ಮಾಡುತ್ತೇವೆ.

ಸೇಮಾ ಇಲೈಷಾ ಕಂಪೆನಿ ಮೈಸೂರು.

ಭಾರತಸರ್ವಸ್ವ

ಭರತಖಂಡದ ಪ್ರಖ್ಯಾತ ಕವಯಿತ್ರಿಯರೂ ಉಜ್ವಲ ದೇಶಭಕ್ತೆಯರೂ ಆದ ಶ್ರೀಮತಿ ಸರೋಜಿನಿ ದೇವಿಯರ ಸುಪ್ರಸಿದ್ಧ ಪುಸ್ತಕವಾದ 'ಸೋಲ್ ಆಫ್ ಇಂಡಿಯ' ಎಂಬುದರ ಕನ್ನಡ ಪರಿವರ್ತನೆ ಕ್ರಯ 1 ಆಣೆ ಒಂದೂವರಾಣೆಯ ಸ್ಟ್ಯಾಂಪನ್ನು ಕಳುಹಿಸಿದರೆ ಒಂದು ಪುಸ್ತಕ ಕಳುಹಿಸಲ್ಪಡುತ್ತದೆ.

ವಿಳಾಸ—ಸತ್ಯವಾದಿ ಆಫೀಸ್ ಮೈಸೂರು.

ಕಲಾಮಂದಿರಂ, ಬೆಂಗಳೂರು ಸಿಟಿ

ನಮ್ಮಲ್ಲಿ ಎಲ್ಲಾ ವಿಧವಾದ ಪೇಯಿಂಟಿಂಗ್ ಎಂಲಾರ್ಜಮೆಂಟು ಕೆಲಸಗಳೂ, ಚಿತ್ರಪಠಗಳನ್ನು ಬರೆಯುವುದು ಮುಂತಾದ ಕುಶಲವಿದ್ಯೆಗಳು ಉತ್ತಮ ರೀತಿಯಿಂದ ನಡೆಯುತ್ತವೆ. ಮತ್ತು ವಿದ್ಯಾರ್ಥಿಗಳನ್ನು ಕುಶಲವಿದ್ಯೆಗಳಲ್ಲಿ ತಯಾರ್ಮಾಡುವೆವು. ಈ ಒಂದು ತಿಂಗಳವರಿಗೆ 16—12 ಸೈಜು ಎಂಲಾರ್ಜುಮೆಂಟ್ ಮಾಡುವುದಕ್ಕೆ ಕಮ್ಮಿ ಚಾರ್ಜು ಅಂದರೆ 12 ರುಪಾಯಿಗೆ ಮಾಡಿಕೊಡುವೆವು. ಫೋಟೋ ಮತ್ತು ಅರ್ಧ ಹಣ ಕವಾನಿಸಿ.

"ಸತ್ಯವಾದಿ"

ಮೇ ೮ ೧೯೨೫

ಇಂದಿನ ನಾಟಕ ಸಂಘಗಳು

ಇಂದಿನ ನಾಟಕ ಸಂಘಗಳ ಸ್ಥಿತಿಯೇನು? ಅಭಿನೇತೃಗಳ ಅವಸ್ಥೆಯು ಹೇಗಾಗಿ ಹೋಗಿದೆ? ಮಾನವ ಸಮಾಜಕ್ಕೆ ಇವುಗಳಿಂದಾಗುತ್ತಿರುವ ಪ್ರಯೋಜನದ ಪರಿಮಾಣವಾದರೂ ಎಷ್ಟು? ಸಂದುಗೊಂದೊಂದು ನಾಟಕ ಸಂಘಗಳಾಗುತ್ತಿರುವುದೇನೋ ನಿಜ. ಆದರೆ ಒಂದು ಮಾತು—ಇವುಗಳಿಂದ ಯಾರಿಗೆ ಏನು ಸುಖವಾಗಿದೆ? ಜನ ಸಮಾಜಕ್ಕೆ ಸುಖ ಉಂಟಾಗುವುದೊಮ್ಮೆಗಿರಲಿ. ಆ ಸಂಘಗಳಿಗಾಗಿರುವ ಉನ್ನತಿಯಾದರೂ ಏನು? ಸಂಘಗಳು ಹುಟ್ಟುತ್ತಲಿವೆ; ಬಡವನ ಮನೋರಥದಂತೆ ಒಡನೆಯೇ ಬಯಲಾಗುತ್ತಿವೆ! ಇದರಿಂದ ಅರ್ಥಹಾನಿ, ಮಾನಹಾನಿಗಳೊಂದಿಗೆ ನೈತಿಕ ಅವನತಿಯಲ್ಲದೆ ಮತ್ತೇನಾದೀತು? ಲೋಕ ಕಲ್ಯಾಣಕ್ಕಾಗಿಯೇ ನಿರ್ಮಿತವಾದರೂ ಇಂದಿನ ನಾಟಕ ಸಂಘಗಳು ವಿಪರೀತ ಫಲದಾಯಕಗಳಾಗಿರುವುದೆಂದರೆ ಎಂತಹ ಕಡುದುಗುಡದ ಮಾತು!

ಇಂದಿನ ನಾಟಕ ಸಂಘಗಳಲ್ಲು ಉನ್ನತಿಯು ದಾರಿ ತಪ್ಪಿ ಅವನತಿಯ ಹಾದಿಯನ್ನು ಹಿಡಿದಿವೆಯೆಂದು ಹೇಳುವುದು ಸಾಹಸದ ಮಾತಲ್ಲ. ಹೀಗೆಂದರೆ, ಕಡುಕೋಪದಿಂದ, ಉತ್ತಮವಾದ ನಾಟಕ ಸಂಘವೇ ಇಲ್ಲವೋ ಎಂದು ಕೇಳುವರಿದ್ದರೆ—ಅವರನ್ನು ವಿನಯದಿಂದ ಕೇಳುವುದೇನೆಂದರೆ—ಅಂತಹ ನಾಟಕ ಸಂಘಗಳಿವೆ? ಅವುಗಳಿಂದ ಜನಾಂಗಕ್ಕಾಗಿರುವ—ಆಗುತ್ತಿರುವ ಮತ್ತು ಆಗುವ ನಿಜವಾದ ಉನ್ನತಿಯಾಗಲೀ ಉಪಕಾರವಾಗಲೀ ಏನು? ಬೆರಳು ಮಡಿಸಲಿ! ಎಂದು.

ಹಾಗಾದರೆ ಅವನತಿಗೆ ಕಾರಣವೇನು? ನಾಟಕ ಸಂಘಗಳು ಬಂದ ಮಂದಿಯನ್ನು ಯಾವುದಾದರೊಂದು ಬಗೆಯಿಂದ ಆಗಿನ ಮಟ್ಟಿಗೆ ಸಂತೋಷಪಡಿಸುವ ವಿಲಾಸಭವನಗಳಾದರೆ, ನಿರಕ್ಷರರಾಗಿ ಸಂಕುಚಿತ ಬುದ್ಧಿಗಳಾದ ವಿಷಯಲೋಲುಪರಿಂದ ಕೂಡಿದುದಾದರೆ ಅವನತಿಗೆ ಇನ್ನೇನಾಗಬೇಕು? ನಾಟಕ ಸಂಘಗಳ ವಿಚಾರವಾಗಿ ಒಂದಾನೊಂದು ಹೆಸರುವಾಸಿಯಾದ ವೃತ್ತ ಪತ್ರಿಕೆಯಲ್ಲಿ ಓದಿದುದು ಈಗ ಜ್ಞಾಪಕಕ್ಕೆ ಬರುತ್ತಿದೆ. ಅದೊಂದರಿಂದಲೇ ಇಂದಿನ ನಾಟಕ ಸಂಘಗಳ ವಿಚಾರವಾಗಿ ಅನೇಕ ವಿಷಯಗಳನ್ನು ತಿಳಿದುಕೊಳ್ಳಬಹುದಾಗಿರುವುದರಿಂದ ಅದನ್ನು ಪಾತಕನ ಹಾಶಯರ ಮುಂದಿಡುವುದು ಒಳ್ಳೆಯದೆಂದು ಭಾವಿಸುವೆವು.

ದಿನದಿನವೂ ಹೊಸದಾದುದರಲ್ಲಿ ಮಾನವರ ಮನಸ್ಸು ಪರಿತೋಷ ಹೊಂದುವುದು. ಮಾನವ ಜಾತಿಗೆ ಹೊಸಹೊಸ ಬಯಕೆಯು ಸ್ವಾಭಾವಿಕವಾದುದು. ಇದರಲ್ಲಿ ಆಕ್ಷೇಪವೇನೂ ತೋರದು. ಎಲ್ಲ ವೇಳೆಯಲ್ಲಿಯೂ ಒಂದೇ ಸಮನಾಗಿ ಯಾವುದೂ ಸುಖಾಂಶವೂ ಆಗುವುದಿಲ್ಲ. ಸುಖವೆಂಬುವುದರಲ್ಲಿ ಕೂಡ ಸ್ವಲ್ಪ ಕಾಲಕಳೆದರೆ ಅದರ ಸುಖಕರತ್ವವು ಇರುವುದಿಲ್ಲ. ದುಃಖವಿಲ್ಲದಿದ್ದರೆ ಸುಖದ ಅನುಭವವುಂಟಾಗದು; ಅಗಲಿಕೆಯುಂಟಾಗದಿದ್ದರೆ ಪುನಃ ಸೇರುವಿಕೆಯಿಂದ ಸುಖತೋರುವುದಿಲ್ಲ; ಹಗಲೊಂದೇ ಸುಖಗೊಳಿಸದಂತೆ, ಕೇವಲ ಕಗ್ಗತ್ತಲೆಯ ರಾತ್ರಿಯಾಗಲೀ ಬೆಳದಿಂಗಳ ರಾತ್ರಿಯಾಗಲೀ ಮನಸ್ಸನ್ನು ಸಂತೋಷಪಡಿಸುವುದಿಲ್ಲ. ಸುಖ ದುಃಖ, ವಿರಹ ಸೇರುವಿಕೆ, ಮತ್ತು ಹಗಲು ರಾತ್ರಿಗಳೆರಡೂ ಇರಬೇಕು.

ಏಡಬಿಡದೆ ಸಂಸಾರಕಷ್ಟದಲ್ಲಿ ರಕ್ತವನ್ನೇ ಹೀರಿಬಿಡುವ ವಿಷಯಗಳ ವ್ಯಸನದಲ್ಲಿ ಮನುಷ್ಯನು ಮುಳುಗಿ ಹೋಗಿರುವುದಾಗದು. ಯಾವನು ಅತ್ತಿತ್ತ ಅಲುಗದಂತೆ ಮೂಗಿಗೆ ಕವಡೆ ಕಟ್ಟಿಕೊಂಡು ದುಡಿಯುತ್ತ ಸಂಸಾರದ ವ್ಯಾಪಾರದಲ್ಲಿ ಮುಳುಗಿರುವನೊ ಅವನ ಬದುಕು ಎಂತಿರುವುದೆಂಬುದನ್ನು ಹೇಳಲಾಗುವುದಿಲ್ಲ. ವ್ಯಾಯಾಮವು ಹೇಗೆ ಮೈಗೆ ಬಲವನ್ನು ತಂದು ಕೊಡುವುದೋ, ವಿಶ್ರಾಂತಿಯೂ, ಆಮೋದವೂ ಹಾಗೆಯೇ ಮನಸ್ಸಿನ ಬಲವನ್ನು ಕಾಪಾಡಿಕೊಂಡು ಬರುವುದು. ಇದರ ಸಲುವಾಗಿಯೇ ಜನವು ಆಮೋದಾಗಾರವನ್ನು ಹುಡುಕುವುದು. ಈ ಆಮೋದದ ಸಲುವಾಗಿ ಬೇರೆಬೇರೆ ದೇಶಗಳಲ್ಲಿ ಬಗೆಬಗೆಯ ಆಮೋದಗಳುಂಟು. ನಾವು ಕೆಟ್ಟುದಾದ ಆಮೋದದ ಆಲೋಚನೆ ಮಾಡುವುದಿಲ್ಲ: ಹಿತಕರವಾದ ಆಮೋದದ ವಿಷಯವನ್ನು ಹೇಳುವೆವು. ಹಿತಕರವಾದ ಆಮೋದವು ಯಾವ ರೀತಿಯಿಂದಲೂ ಹೀನವಾದುದಲ್ಲ, ಮೇಲಾಗಿ ಅಗತ್ಯವಾಗಿ ಬೇಕಾದುದು.

ಆಮೋದವು ಅನೇಕ ವಿಧವಾಗಿದೆ. ನಾಗರಿಕತೆ ಇಲ್ಲದ ಕಾಡುಜಾತಿಯ ಜನಾಂಗವು ಯಾವುದರಲ್ಲಿ ಆಮೋದಹೊಂದುವುದೋ ಅದೇ ನಾಗರಿಕ ಜಾತಿಗೆ ಜುಗುಪ್ಸೆಯನ್ನುಂಟುಮಾಡುವುದು. ಮತ್ತಾದರೋ ನಾಗರಿಕ ಜಾತಿಯ ಆ ಆಮೋದವು ಅದಕ್ಕಿಂತ ಮೇಲ್ತರದ ಸಭ್ಯಜಾತಿಗೆ ಬಿಡತಕ್ಕುದಾಗಿರಬಹುದು. ಸಕಲ ಜಾತಿಗೂ ಅನುರಾಗ ತೋರುವ ಅದೊಂದು ಪ್ರಕಾರದ ಆಮೋದವೊಂದುಂಟು. ಸಂಗೀತದಲ್ಲಿ ಯಾರು ಯಾವಾಗ ಆಸಕ್ತಿಯಿಲ್ಲದವರಾಗಿದ್ದಾರೆ ಹೇಳಿ? "ಸವಿದ್ಯಾ ಸಂಗೀತಾತ್ಪರಾ"

ನೃತ್ಯಗೀತೆಗಳು ಎಲ್ಲರೊಳಗೆಯೂ ವಾಡಿಕೆಯಾಗಿ ಬಂದಿದೆ. ಉಲ್ಲಾಸವಾಯಿತೆಂದರೆ ತನಗೆ ತಾನೇ ನೃತ್ಯಗೀತೆಗಳಿಗೆ ಮೊದಲಾಗುವುದು ಸಂಗೀತದಿಂದ ಅಡವಿಯ ಪಶುಗಳು ವಶವಾಗುವುವು, ಇನ್ನು ಮನುಷ್ಯನ ಪಾತೇನು!

ನಾಗರಿಕ ಜನಾಂಗದಲ್ಲಿ ಈ ಗೀತವಾದ್ಯಗಳ ಉನ್ನತ ಸಾಧನದ ಸಲುವಾಗಿ ಬಂದು ಸ್ವತಂತ್ರ ವಿಭಾಗವಿದೆ. ಎಲ್ಲರೀತಿಯ ಸಾಂಸಾರಿಕ ಕಾರ್ಯಗಳಿಗೂ ಒಂದೊಂದು ಬಗೆಯ ವಿಭಾಗವಿರುವಂತೆ, ಆಮೋದದ ಸಲುವಾಗಿಯೂ ಬಂದು ಬಗೆಯ ವಿಭಾಗವುಂಟು. ನಮ್ಮ ದೇಶದಲ್ಲಿ ನಾಟಕಸಂಘಗಳಿವೆ. ಪಾಶ್ಚಾತ್ಯ ದೇಶಗಳಲ್ಲಿ ನಾಟ್ಯಸಮಾಜಗಳಿವೆ. ನಾಟ್ಯಸಮಾಜದಲ್ಲಿ ನೃತ್ಯಗೀತೆಗಳುಂಟು, ಮತ್ತಾದರೋ, ಅದರೊಂದಿಗೆ ಸಾಮಾಜಿಕ, ಐತಿಹಾಸಿಕ ಸಂಗತಿಗಳು ಜೀವಂತ ಭಾವದಲ್ಲಿ ಕಣ್ಣು ಮುಂದೆ ತೋರಿಸಲ್ಪಡುವುವೆಂದು, ನಾಗರೀಕತೆಯ ದೇಶಗಳಲ್ಲಿ ನಾಟಕಸಂಘಗಳಿಗೆ ಇಷ್ಟೊಂದು ಆದರ. ನಾಟಕಾಲಯದಲ್ಲಿ ಒಮ್ಮೆಗೇ ಎರಡು ವಿಷಯಗಳು ತೋರಿಸಲ್ಪಡುವುವು; ಒಂದುಕಡೆ ಲೋಕವ್ಯವಹಾರ, ಮತ್ತೊಂದೆಡೆ ಸಂಗೀತ ಸಾಧನ.

ನಾಟಕ ಸಂಘವು ಜನರ ತಿದ್ದುವಿಕೆಗೆ ಒಂದು ಮುಖ್ಯಸ್ಥಳ. ಈ ಸ್ಥಳದಲ್ಲಿ ಸುಲಭವಾಗಿ ಆನೋದದೊಂದಿಗೆ ಯಾವ ತಿಳಿವಳಿಕೆಯುಂಟಾಗುವುದೋ ಅದು ಬೇರೆಡೆಯಲ್ಲಿ ಉಂಟಾಗುವುದಿಲ್ಲ. ಪಾಠಶಾಲೆಯಲ್ಲಿ ಉಪಾಧ್ಯಾಯನು ಬೆತ್ತವನ್ನು ಹಿಡಿದು ಕ. ಖ. ಗ. ವನ್ನು ಹೇಳಿಕೊಡಬಲ್ಲನು ನಿಜ, ಆದರೆ ಜೀವಂತವಾದ ಲೋಕಚರಿತ್ರೆಯನ್ನು ತಿಳಿಸಿಕೊಡಲಾರನು. ನಾಟಕಾಲಯದಲ್ಲಾದರೋ ಆ ಶಿಕ್ಷಣಲಾಭವಾಗುವುದು. ಕಾರಣವೇನೆಂದರೆ—ನಾಟಕಮಂದಿರದಲ್ಲಿ ಲೋಕಚರಿತ್ರೆಯು ಅತಿಪರಿಸ್ಫುಟವಾಗಿ ಚಿತ್ರಿತವಾಗುವುದರಿಂದ ಸುಲಭವಾಗಿ ತಿಳಿವಳಿಕೆ ಬರುವುದು. ಯಾವ ಜನಾಂಗದಲ್ಲಿ ನಾಟಕ ಸಂಘಗಳು ಹುಟ್ಟಿರುವುದಿಲ್ಲವೋ ಆ ಜನಾಂಗವು ಈಗಲೂ ನಾಗರಿಕ ಜನಾಂಗದ ಸಾಲಿನಲ್ಲಿ ಸೇರಿರುವುದಿಲ್ಲ. ಸೇರುವುದೂ ಇಲ್ಲ

ಆಮೋದದೊಂದಿಗೆ ಜ್ಞಾನಸಂಪಾದನೆಯು ಕೇವಲ ಸಾಮಾನ್ಯವಾದ ವ್ಯಾಪಾರವಲ್ಲ. ಯಾರು ಈ ಬಗೆಯ ಶಿಕ್ಷಣವನ್ನು ಕೊಡಲು ಸಮರ್ಥರೋ ಅವರು ನಿಜವಾದ ಅಭಿನೇತೃಗಳೆಂಬ ಹೆಸರಿಗೆ ಅರ್ಹರು. ಅಭಿನಯ ಮಾಡುವುದು ಸಾಧಾರಣ ವಿಷಯವಲ್ಲ. ಸಂಸಾರದಲ್ಲಿದ್ದು ಸಮಾಜ ಚಿತ್ರವನ್ನೇನೋ ನೋಡುತಿರುತ್ತೇವೆ. ಆದರೂ ನಾಟಕ ಮಂದಿರಕ್ಕೆ ಹೋದರೆ ಮಾನವ ಚರಿತ್ರ ಸಂಬಂಧವಾಗಿ ಏನಾದರೂ ಹೊಸ ಶಿಕ್ಷಣದ ಲಾಭಹೊಂದುವೆವು. ಅದೇ ನಾಟಕ ಮಂದಿರದ ಉಪಯೋಗ ಮತ್ತು ಮರ್ಯಾದೆ ಯಾವಾತನು ಅಂತಹ ಶಿಕ್ಷಣವನ್ನು ಕೊಡಬಲ್ಲನೋ ಆತನಿಗೆ ಅಭಿನಯ ಕೌಶಲವು ತಿಳಿದಿದೆ ಎಂದು ಹೇಳಬಹುದು.

ಮೊದಲೇ ಹೇಳಿರುವೆವು. ಅಭಿನಯವು ಸಾಧಾರಣ ವಿಷಯವಲ್ಲ. ಅಭಿನೇತೃವು ಯಾವ ಭಾಗವನ್ನು ಅಭಿನಯಿಸಬೇಕೊ, ಸರಿಯಾಗಿ ಅದೇ ಚಿತ್ರವನ್ನು ನೋಟಕರ ಹೃದಯದಲ್ಲಿ ನೆಡುವಂತೆ ಮಾಡಬೇಕು. ತನ್ನನ್ನು ತಾನು ಮರೆತುಹೋಗಿ, ಸಹಜವಾಗಿ ಅಭಿನೀತವಾಗಬೇಕಾದ ವ್ಯಕ್ತಿಯೇ ತಾನಾಗಿಬಿಡಬೇಕು. ನೋಟಕನು ಯಾವ ಅಭಿನಯವನ್ನು ನೋಡುತ್ತಿರುವನೋ ಅದರಿಂದ ವಿಸ್ಮಿತನಾಗಿ ಪ್ರಕೃತ ಚರಿತ್ರವನ್ನು ತನ್ನ ಕಣ್ಣುಮುಂದೆಯೇ ನೋಡುತ್ತಿರುವುದಾಗಿಯೇ ಯೋಚಿಸಬೇಕು. ಆಗ ನಾಟಕದ ಉತ್ಕೃಷ್ಟತೆ, ಆಗ ನೋಟಕನಿಗೆ ಮನಸ್ತುಷ್ಟಿ. ಹಾಗಲ್ಲದಿದ್ದರೆ, ನಮ್ಮ ಈಗಣ ನಾಟಕ ಸಂಪ್ರದಾಯದಮೇಲೆ ಸಾಮಾನ್ಯಜನದ ಜುಗುಪ್ಸೆಯನ್ನೂ ಹೆಚ್ಚುಮಾಡಿದ ಹಾಗಾಗುವುದು.

ಕೊಡಗಿನಲ್ಲಿನ ಮೊದಲನೆ ಮೆಂಬರವರು ಕಡೂರ ಮತ್ತು ಶಿವಮೊಗ್ಗ ಡಿಸ್ಟ್ರಿಕ್ಟುಗಳಲ್ಲಿ ಸಂಚಾರ ಮಾಡುತ್ತಾರೆ. ಅವರು ಭದ್ರಾವತಿ, ಹೆಬ್ಬೆ, ಆಗುಂಬೆ ಮತ್ತು ತಿನಮೊಗ್ಗ ಈ ಸ್ಥಳಗಳಿಗೆ ದಯಮಾಡಿಸಿದ ನಂತರ ಹಾಲಿ ಈಗ ಏರ್ಪಡಿಸಿರುವಂತೆ ಈ ತಿಂಗಳ 11 ನೇ ತಾರೀಖಿನ ದಿನ ಪ್ರಾತಃಕಾಲ ಬೆಳಗಿನ ಹಿಂದಿರುಗಿ ಬರುತ್ತಾರೆ.

ಜರ್ಮನಿಯಲ್ಲಿಯ ಲೀಪ್ಸಿಗ್ಗಿನ ಮುಖ್ಯ ಸ್ಥಾನದವರ ತೀರ್ಮಾನದಂತೆ ಪಂಚಾಯತ್ ಕೋರ್ಟಿನಲ್ಲಿ ನಿದ್ರಿಸುತ್ತಿರಬಹುದೆಂದೂ ಸ್ಥೂಲ ದೇಹವು ಹಾಜರುದ್ದರೆ ಸಾಕೆಂದು ಪಟ್ಟಿದೆ.

ವೃತ್ತಾಂತ ಸಂಗ್ರಹ

—ಕೆಲದಿವಸಗಳ ಹಿಂದೆ ತಿರುವ್ವೂರಿನಲ್ಲಿ ಒಬ್ಬ ಬ್ರಾಹ್ಮಣೇತರ ಹೆಂಗಸಿಗೆ ಒಂದು ಮಗುವು ಹುಟ್ಟಿರುವುದೆಂದೂ ಅದರ ಮೂತ್ರಕೋಶವು ಹೊಟ್ಟೆಯ ಮಧ್ಯದಲ್ಲಿರುವುದೆಂದೂ ಅಲ್ಲಿಂದಲೇ ಮೂತ್ರವಿಸರ್ಜನೆ ಮಾಡುತ್ತಿರುವುದೆಂದೂ ಆರೋಗ್ಯಸ್ಥಿತಿಯಲ್ಲಿಯೇ ಇರುವುದೆಂದೂ ವರ್ತಮಾನ.

—ಬೊಂಬಾಯಿನಲ್ಲಿ ಒಂದು ಮನೆ ಕೆಡವುತ್ತಿದ್ದಾಗ ಅಲ್ಲಿ ಕೆಲಸಮಾಡುತ್ತಿದ್ದ ಕೂಲಿಗಾರರ ಪೈಕಿ ೬ ಜನರು ಒಡೆದುಬೀಳುತ್ತಿದ್ದ ಸಾಮಾನಿನ ಮಧ್ಯೆ ಸಿಕ್ಕಿಕೊಂಡರು. ಅವರನ್ನು ಜೀವಸಹಿತ ಈಚೆಗೆ ಎಳೆದುಕೊಂಡು ತುಂಬಾ ಏಟುಬಿದ್ದಿದ್ದುದರಿಂದ ಆಸ್ಪತ್ರೆಗೆ ಸಾಗಿಸಿರುತ್ತಾರೆ.

—ಹೈದರಾಬಾದಿನ ಮಿಲಿಟರಿ ಪವಿತ್ರಿಗಳಾದ ಲಟೀಫ್ ಉದ್ದಾಲಾ ನವಾಬರು ಈಗ್ಗೆ ಕೆಲವುದಿವಸಗಳ ಹಿಂದೆ 'ಪಕ್ಕಲ್' ಕಾಡಿಗೆ ಬೇಟೆಗಾಗಿ ಹೋದರು. ಅಲ್ಲಿ ಒಂದು ದೊಡ್ಡ ಹುಲಿಯನ್ನೂ ಒಂದು ಚಿರತೆಯನ್ನೂ ಮತ್ತು ಒಂದು ಕರಡಿಯನ್ನೂ ಶಿಕಾರಿ ಮಾಡಿದರು. ಮಾರನೆಯ ದಿನ ಬಹುಕಾಲದಿಂದಲೂ ದನಕರುಗಳನ್ನು ಅಪಹರಿಸುತ್ತಿದ್ದ ಒಂದು ಭಾರಿ ಹುಲಿಯು ಸಮೀಪದಲ್ಲೇ ಬಂದಿರುವುದೆಂದು ಸಮಾಚಾರ ಬರಲು ನವಾಬರು ತಮ್ಮ ಅನುಚರರೊಂದಿಗೆ ಆ ಹುಲಿಯನ್ನು ಶಿಕಾರಿಮಾಡಲು ಹೊರಟರು. ಹುಲಿ ಇರುವ ಸ್ಥಳವನ್ನು ಗುರುತಿಸಿ ಅದನ್ನು ಹೊಡೆದು ಗಾಯಪಡಿಸಿದರು. ಹುಲಿಯು ತಪ್ಪಿಸಿಕೊಂಡು ಹೋಗಿ ಅಡವಿಯಲ್ಲಿ ಅವಿತುಕೊಂಡಿತ್ತು. ಒಬ್ಬ ನವಾಬನು ಆ ಹುಲಿಯನ್ನು ಗುಹೆಯಿಂದ ಹೊರಹೊರಡಿಸುವುದಕ್ಕೆ ಪ್ರಯತ್ನಪಟ್ಟಾಗ ಅಕಸ್ಮಾತ್ತಾಗಿ ಆ ಹುಲಿಯು ಅತನ ಮೇಲೆ ಹಾರಿ ಅತನನ್ನೂ ಅತನ [illegible]ಯನ್ನೂ ಕೊಂದಿತು. ನಂತರ ಬಬ್ಬ ಬೇಟೆಗಾರನ ಮೇಲೆ ಬಿದ್ದು ಅವನ್ನೂ ಸಹ ಕೊಂದಿತು. ನಂತರ ಹತ್ತಿರದಲ್ಲಿದ್ದ ಒಬ್ಬ ಹುಡುಗನ ಮೇಲೆ ಬಿದ್ದು ಬಹಳವಾಗಿ ಗಾಯಪಡಿಸಿದ್ದರಿಂದ ಅವನನ್ನು ಆಸ್ಪತ್ರೆಗೆ ಸಾಗಿಸಲು ಅವನು ಅಲ್ಲಿ ಮೃತಪಟ್ಟನೆಂದೂ ಕೊನೆಗೆ ನವಾಬರು ಈ ಹುಲಿಯನ್ನು ಹೊಡೆದುಹಾಕಿದರೆಂದೂ ತಿಳಿದುಬರುತ್ತೆ.

—ಕೆಲವು ದಿವಸಗಳ ಹಿಂದೆ ಊಟ್ಟಿಯ ಕಾಫಿಪ್ಲಾಂಟರ್ ಮೆ|| ಹೆರಿಫರ್ಡ್‌ರವರು ತಮ್ಮ ಶಿಕಾರಿದಾರರು ಮತ್ತು ಬೇಟೆನಾಯಿಗಳಿಂದೊಡಗೂಡಿ ಶಿಕಾರಿಗೋಸ್ಕರ ಹೋದರು. ಕೆಲವು ದಿವಸಗಳಿಂದಲೂ ದನಕರುಗಳನ್ನು ಬಹಳವಾಗಿ ಕೊಳ್ಳೆಹೊಡೆಯುತ್ತಿದ್ದ ಒಂದು ಹುಲಿಯನ್ನು ಆಕ್ರಮಣಮಾಡಿ ಬಹಳ ಪ್ರಯಾಸದಿಂ[illegible] ಆ ಹುಲಿಯನ್ನ ಹೊಡೆದು ಗಾಯಪಡಿಸಿದರು [illegible]ಲಿಯು ಸಾಯದೆ ತಪ್ಪಿಸಿಕೊಂಡು ಹೋಯಿತು [illegible]ರ್ಡ್‌ರವರು ಊಟಕ್ಕಾಗಿ ತಮ್ಮ ಬಂಗಲೆಗೆ [illegible]ಗಿ ಊಟಮಾಡಿಕೊಂಡು ಸ್ವಲ್ಪ ಹೊತ್ತು ವಿಶ್ರ[illegible]ಂಡು ನಂತರ ಆ ಹುಲಿಯು ಸಮೀಪದಲ್ಲೇ [illegible]ರಬಹುದೆಂದು ತಿಳಿದು ನೋಡಲು ಪುನಃ ಹೋದರು. ಆಗ ನಾಯಿಗಳು ಅಪಾಯ [illegible]ಚಿಸಲು ಹೆರಿಫರ್ಡ್‌ರವರು ಸೂಕ್ಷ್ಮ ತಿಳಿ[illegible]ಡು ಹಿಂದಿರುಗಿ ನೋಡುವುದರಲ್ಲಿ ಆ ಘಾ[illegible]ಟ ಹುಲಿಯು ಮಹಾ ಆರ್ಭಟದಿಂದ ಅವರ ಮೇಲೆ ಹಾರಿತು. ಹೆರಿಫರ್ಡ್‌ರವರು ಧೈರ್ಯಗುಂದದೆ ತಮ್ಮ ಬಲಗಾಲಿನಿಂದ ಬಲವಾಗಿ ಒದೆದು ಗುಂಡಿನಿಂದ ಹೊಡೆದರು. ಆದರೂ ಹುಲಿಯು ಮತ್ತಷ್ಟು ರೇಗಿ ಮೇಲೆ ಬಿದ್ದಿತು. ತಮ್ಮ ಮುಖ ಪರಚಿದಂತೆ ತಮ್ಮ ಎಡಗಾಲನ್ನು ಮುಂದೆ ಚಾಚಿದರು. ಅವರ ಕಾಲನ್ನು ಬಹುವಾಗಿ ಪರಚಿ ದೈವವಶಾತ್ ಓಡಿತು. ನಂತರ ಅವರನ್ನು ಅಜ್ಜಾನದೆಶೆಯಲ್ಲಿ ಚಿಕಿತ್ಸೆಗೆ ಸಾಗಿಸಿದಾಗ ಆಸ್ಪತ್ರೆಯಲ್ಲಿ ಮೃತಪಟ್ಟರು.

—ಹಿಂದೆ ಈ ಪತ್ರಿಕೆಯಲ್ಲಿ ಪ್ರಕಟಿಸಿದ್ದಂತೆ ನಮ್ಮ ದಿವಾರವರಾದ ಮೆ|| ಎ. ಆರ್. ಬಾನರ್ಜಿಸಾಹೇಬರವರು ತಮ್ಮನ್ನು ಪಾಟ್ನಾ ರೈಲು ಸ್ಟೇಷನ್ನಿನಲ್ಲಿ ಅವಮಾನ ಪಡಿಸಿದ ಮಾಸ್ಟ್ವೋರ್ರರ ಕಾರ್ಯಾನ್ವಯ ಇಬ್ಬರು ಯೂರೋಪಿಯರ್ತರಮೇಲೆ ತಮ್ಮ ಮಾನನಷ್ಟಕ್ಕಾಗಿ 10,000 ರೂಪಾಯಿ ಕೊಡಬೇಕೆಂದು ಅವರಿಗೆ ಲಾಯರು ನೋಟೀಸು ಕೊಟ್ಟಿರುತ್ತಾರೆಂದು 'ಟೆಲಿಗ್ರಾಫ್' ಪತ್ರಿಕೆಯಿಂದ ತಿಳಿದುಬರುತ್ತೆ.

—ಬೊಂಬಾಯಿ ಯೂನಿವರ್ಸಿಟಿಯವರು ಬರೋಡಾ ವಿನಲ್ಲಿ 'ಲಾ' ತರಗತಿಯನ್ನಿಡಲು ಅಲ್ಲಿ ಸರಿಯಾದ ವಿದ್ಯಾವಂತರಾದ ಲಾಯರುಗಳು ಇಲ್ಲವಾಗಿ ಈ ಅಭಿಪ್ರಾಯವನ್ನು ಮನ್ನಾ ಮಾಡಿರುತ್ತಾರೆ.

—ಶೋವನದೇವಿ ಎಂಬ ರಮಣಿಯು ಪಾಟ್ನಾ ಯೂನಿವರ್ಸಿಟಿಯಲ್ಲಿ ಬಿ. ಎ ಪರೀಕ್ಷೆಯಲ್ಲಿ ಮೊದಲನೆಯವಳಾಗಿ ತೇರ್ಗಡೆ ಹೊಂದಿರುತ್ತಳೆ. ಪಾಟ್ನಾ ಯೂನಿವರ್ಸಿಟಿಯಲ್ಲಿ ತೇರ್ಗಡೆ ಹೊಂದಿರುವ ರಮಣಿಯಲ್ಲಿ ಈ ಮಣಿಯೇ ಮೊದಲನೆಯವಳು.

—ಕಲಿಕತ್ತಾ ಹೈ ಕೋರ್ಟಿನಲ್ಲಿ ಕೂಚ್‌ಬಿಹಾರ್ ದೇಶದ ಯುವರಾಣಿ ಈಶ್ವರಾಣಿ ನಿರುಪಮಾದೇವಿಯು ತಾನು ಮದುವೆಯಾಗಿದ್ದ ರಾಜಕುಮಾರ ವಿಕ್ಟರ್ ನಿತ್ಯೇಂದ್ರ ನಾರಾಯಣರ ಪತಿಯ ದಾಂಪತ್ಯ ಬಾಧ್ಯತೆಯನ್ನೋಜನೆ ಮಾಡಿಕೊಡಬೇಕೆಂದು ಮೊಕದ್ದಮೆ ದಾಖಲ್ಮಾಡಿರುತ್ತಾರೆ. ವಿಚಾರಣೆ ನಡೆಯುತ್ತಾ ಇದೆ. ಫಲಿತಾಂಶ ನಿರೀಕ್ಷಿಸಿದೆ.

—ಅಲೆಕ್ಸಾಂಡ್ರಿಯಾ ಕಸ್ಟಂ ಆಫೀಸಿನ ಕಾವಲುಗಾರನಾದ 96 ವರ್ಷದ ಖಮಿಸ್ ಇಲರಾಬಿಯವನು ತನ್ನ ಜೀವಮಾನದಲ್ಲಿ 27 ಜನ ಹೆಂಡಿರನ್ನು ಮದುವೆಯಾಗಿ ಕಾರಣಾಂತರದಿಂದ ಎಲ್ಲರನ್ನೂ ತ್ಯಜಿಸಿ 28ನೆಯವಳನ್ನು ಮದುವೆಯಾಗಲು ತನಗೆ ಇಷ್ಟವಿಲ್ಲದ, ಕನ್ನೆಯನ್ನು ಹುಡುಕುತ್ತಿರುವನಂತೆ. ಇವನಿಗೆ 50 ಮಕ್ಕಳಿರುವರು. ತನ್ನನ್ನು ವೃದ್ಧನೆನ್ನುತ್ತಾರೆಂದು ಖಮಿಸ್ಸನು ವ್ಯಸನ ಪಡುತ್ತಾನೆ.

—ಕೋಮಡಿ ಸೇತುವೆ ಬಳಿ ವಾಸವಾಗಿರುವ ನವಮಾಸ ಗರ್ಭಿಣಿಯಾಗಿದ್ದ ಒಬ್ಬ ಕ್ರಿಸ್ತ ಹೆಂಗಸು ಮೊಗುವನ್ನು ಹೆರುವುದಕ್ಕೆ ಬದುಲಾಗಿ, ಮೊಟ್ಟೆಗಳಂತೆ ೧೨ ಮಾಂಸದುಂಡೆಗಳನ್ನು ಹೆತ್ತಳು. ಈ ಆಶ್ಚರ್ಯವನ್ನು ನೋಡಲು ಅನೇಕರು ಹೋಗಿಬರುತ್ತಿದ್ದಾರೆ.

—ಡಾಡ್ಜ್ ಮೋಟಾರು ಕಂಪೆನಿಯನ್ನು ಅಮೇರಿಕಾ ದೇಶದ ಕೆಲ ಬ್ಯಾಂಕರುಗಳು ಒಂದು ಸಂಘವನ್ನು ಮಾಡಿಕೊಂಡು ೪೦,೦೦೦,೦೦೦ ಪೌನುಗಳಿಗೆ ಕೊಂಡುಕೊಂಡರು. 'ವಾಟ್ ಸ್ಟ್ರೀಟಿನಲ್ಲಿ' ಇದುವರೆಗೂ ನಡೆದ ನಗದು ವ್ಯಾಪಾರದಲ್ಲಿ ಇದೇ ಹೆಚ್ಚಾದ ವ್ಯಾಪಾರ. ಈ ಮೋಟಾರು ಕಂಪೆನಿಯು ಇಬ್ಬರು ವಿಧವೆಯರಿಗೆ ಸೇರಿದ್ದಿತು. ಪ್ರತಿಯೊಬ್ಬಳಿಗೂ ೨೦ ೦೦೦ ೦೦೦ ಪೌನುಗಳು ಬಂದವು.

—ಒಬ್ಬ ಜಮೀನುದಾರನ ಆನೆಯು ಮದ ಹತ್ತಿ ಬಹು ರೋಷದಿಂದ ತಪ್ಪಿಸಿಕೊಂಡು ಗೋಲುಪುರದ ಕಾಡನ್ನು ಪ್ರವೇಶಿಸಿ ಅಲ್ಲಿ ಸುಮಾರು ೨೨ ಜನರನ್ನು ಕೊಂದು ಅದೇ ದಿನ ಮದಾನ್ಹ 'ನಾರ್ತ್ ಟ್ರಂಕ್' ರಸ್ತೆಯಲ್ಲಿ ಹೋಗುತಿದ್ದ ಒಬ್ಬ ನೇಪಾಲಿ ಹೆಂಗಸನ್ನು ಸೀಳಿ ಕೊಂದಿತಂತೆ.

—ಅಮೇರಿಕಾ ದೇಶದ ಒಬ್ಬ ಪ್ರಸಿದ್ಧ ಡಾಕ್ಟರು ತನ್ನ ವಿದ್ಯಾ ಬಲದಿಂದ ಬಹು ಕಾಲ ಪರೀಕ್ಷಿಸಿ ಒಬ್ಬ ಮನುಷ್ಯನ ದೇಹದ ಬೆಲೆಯನ್ನು ಈ ರೀತಿ ನಿಶ್ಚಯಿಸಿರುತ್ತಾನೆ:— ಒಬ್ಬ ಸಾಧಾರಣ ಮನುಷ್ಯನ ದೇಹದಲ್ಲಿ ಸಿಗುವ ಪದಾರ್ಥಗಳ ಬೆಲೆ ಹೀಗೆ ಕಟ್ಟಿದರೆ ಒಬ್ಬಾರಿ ಸಾಬೂನು ತಯಾರ್ಮಾಡುವುದಕ್ಕೆ ಸಾಕಾಗುವಷ್ಟು ಕೊಬ್ಬು ಇರುವುದೆಂದೂ; ಒಂದು ಚಿಕ್ಕ ನೊಳೆ ಪಂದಾರ್ಮಾಡುವುದಕ್ಕೆ ಸಾಕಾಗುವಷ್ಟು ಕಬ್ಬಿಣವೂ; ಒಂದು ಹಿಡಿ ಉಪ್ಪು ಕರಗಿಸುವುದಕ್ಕೆ ಬೇಕಾಗುವಷ್ಟು ಸಕ್ಕರೆಯೂ; ೨೫೦೦ ಬೆಂಕಿ ಕಡ್ಡಿಗಳನ್ನು ಮಾಡಲು ಅವಶ್ಯಕವಾದಷ್ಟು ಫಾಸ್ಫರಸ್ ಎಂಬ ಪದಾರ್ಥವೂ; ಒಂದು ಕೋಳೀ ಮೊಟ್ಟೆಯ ಚಿಪ್ಪಿಗೆ ಒಳಿಯುವಷ್ಟು ಸುಣ್ಣವೂ; ಒಂದಾಟದ ಪಿರಂಗಿಯನ್ನು ಡಾಯಿಸುವಷ್ಟು ಪೊಟಾಸಿಯಂ; ಒಂದು ನಾಯಿಯ ಮೈ ಮೇಲಿರುವ ಚಿಗಟವನ್ನು ಸಾಯಿಸುವದಕ್ಕಾಗುವಷ್ಟು ಗಂಧಕವೂ; ಒಂದು ಡೋಸು ಮೆಗ್ನೀಸಿಯಾ ಏಗೆಬೇಕಾದ ಮೆಗ್ನೀಸಿಯಾವೂ ಇರುವುದೆಂದು ಡಾಕ್ಟರ್ ಚಾರ್ಲೆಸ್ ಹೆಚ್. ಮೇಯೋರವರು ಕಂಡುಹಿಡಿದಿರುವರು. ಇದರ ಒಟ್ಟು ಬೆಲೆಯು ೯೯ ಸೆಂಟು ಅಥವಾ ದೇಹದ ಬೆಲೆ ೩ ರೂಪಾಯಿಗಳು.

ಬರೋಡಾ ಸುಂದರಿಯ ಅಪಹರಣ ಮೊಖದ್ದಮೆ ವಿಚಾರ

ಮುಂದಿನ ವಾರ

—ಮದ್ರಾಸ್ ಹೈ ಕೋರ್ಟಿನಲ್ಲಿ ಗುಂಟೂರಿನಿಂದ ಬಂದಿದ್ದ ಇಬ್ಬರು ಸುತ್ತಾಡುತಿದ್ದರು. ಅವರ ಹತ್ತಿರ ದೊಡ್ಡ ದೊಣ್ಣೆ ಮತ್ತು ಕುಡಗೋಲು ಇದ್ದವು. ಕೋರ್ಟು ಆಳುಗಳನ್ನು ನೋಡಿ ಬಾಗಿಲ ಹಿಂದೆ ಅವಿತುಕೊಂಡರು. ಪೋಲೀಸಿನವರು ಇವರನ್ನು ದಸ್ತಗಿರಿಮಾಡಿ ಮ್ಯಾಜಿಸ್ಟ್ರೇಟರ ಮುಂದೆ ಕರೆತಂದರು. ಇಬ್ಬರಿಗೂ ೫೦ ರೂಪಾಯಿ ಜುಲ್ಮಾನೆ ವಿಧಿಸಲಾಗಿದೆ.

—ನ್ಯೂಯಾರ್ಕ್ ಪಶುಪಾಲನೋದ್ಯಾನದ ಮೆ|| ಹ್ಯಾಂಡಿಯವರು ತಿರ್ಯಗ್ಜಂತುಗಳನ್ನು ಕೊಂಡು ಹೊಗಲು ಇಂಡಿಯಾಕ್ಕೆ ಬಂದಿರುವರು. ಅವರು ಇಲ್ಲಿಂದ ತಮ್ಮೊಡನೆ ೩೫ ಆನೆಗಳನ್ನೂ ೧೪ ಹುಲಿಗಳನ್ನೂ ೪೦ ಹೆಬ್ಬಾವುಗಳನ್ನೂ ೨೦೦ ಕೋತಿಗಳನ್ನೂ ೩೦೦ ವಿವಿಧ ಹಾವುಗಳನ್ನೂ ತೆಗೆದುಕೊಂಡು ಹೋಗುವವರಾಗಿದ್ದಾರೆ. ೪ ಜನ ಮಾವಟಿಗರನ್ನೂ ಕರೆದು ಕೊಂಡುಹೋಗುತ್ತಾರೆ.

—ಮೈಸೂರು ಕೃಷ್ಣರಾಜೇಂದ್ರಾ ಮಿಲ್ಲಿನ ಡೈರೆಕ್ಟರವರ ರಿಪೋರ್ಟು ಮತ್ತು ಬ್ಯಾಲೆನ್ಸ್ ಷೀಟು ಪ್ರಕಾರ ೩೧—೧೨—೧೯೨೪ಕ್ಕೆ ಸಾಲಿಗೆ ೩೨೦೧೬೭ ರೂಪಾಯಿಗಳೂ ೧೩ ಆಣೆ ೮ ಪೈ ಗಳು ನಷ್ಟವಾಗಿದೆಯೆಂದು ತಿಳಿಯಬಂದಿದೆ.

—ಕಲ್ಕತ್ತಾದ ಬಾರಾ ಬಜಾರಿನಲ್ಲಿನ ನಾಲ್ಕು ಒಣಹುಲ್ಲಿನ ಗಡಂಗುಗಳಿಗೆ ಬೆಂಕಿಬಿದ್ದು ಸುಮಾರು ೫೦ ಸಾವಿರ ರೂಪಾಯಿನಷ್ಟು ನಷ್ಟವಾಗಿದೆ.

To Popularise your Business

in the Karnataka Provinces

YOU MUST ADVERTISE IN

SATYAVADI" of MYSORE

BECAUSE

is the cheapest and most up-to-date Karnatic Weekly
It is read largely and widely
It is circulated among all grades of persons
It offers a profitable medium for advertising

Advertisement in this Paper means an investment
Others have found it so
WE AWAIT YOUR ESTEEMED TRIAL

RATES of ADVERTISEMENTS

	1 page	1 column	½ clm	¼ clm	1 inch
year	Rs 250	100	55	30	12
nonths	135	55	30	17	7
nonths	75	30	17	9	4
nonth	30	11	6	4	1-8-0
nsertion	8	3	2	1-4-0	0-8-0

Advertisement charges are strictly payable in advance. ıe column measures about 13"×2½". 3 columns to a ge. Voucher copy supplied free

All communications & remittances to be addressed to
The Manager,
SATYAVADI OFFICE,
Mysore, S. India.

SPACE FOR ADVERTISEMENT

ಇಂಡಿಯಾ ಸ್ಯಾವಿಡೆಂಟ್ ಕಂಪೆನಿ ಲಿಮಿಟೆಡ್

ಸುಪ್ರಸಿದ್ಧವಾದ ಈ ಕಂಪೆನಿಯು ಕಲ್ಕತ್ತಾದಲ್ಲಿ 1910 ರಲ್ಲಿ ಸ್ಥಾಪಿತವಾದುದು. ಕಂಪೆನಿಯ ಭದ್ರತೆಗೆ ಸರ್ಕಾರದಲ್ಲಿ ಹಣ ಡಿಪಾಜಿಟ್‌ಮಾಡಿರುತ್ತೆ. ತಿಂಗಳಿಗೆ 1 ರೂಪಾಯಿ ವಾ 8 ಆಣೆ ಪ್ರಕಾರ ರೂ 500, ರೂ 250 ಗಳಿಗೆ, ಪುರುಷರಿಗೂ ಸ್ತ್ರೀಯರಿಗೂ, ವೈದ್ಯಪರೀಕ್ಷೆ ಇಲ್ಲದೆ, ವಯಸ್ಸಿನ ಪ್ರತಿಬಂಧಕವಿಲ್ಲದೆ, ಜೀವವಿಮೆ ಮಾಡಲಾಗುತ್ತೆ. ಹೆಚ್ಚು ವಿಷಯಕ್ಕೂ, ಏಜೆಂಸಿಯ ಷರತ್ತಿಗೂ ಕೆಳಗಿನ ವಿಳಾಸಕ್ಕೆ ಬರೆಯರಿ.

ಮೈಸೂರು ಮತ್ತ ಕೊಡಗಿನಚೀಫ್ ಏಜೆಂಟ್
927 ಚಾಮರಾಜ ಪುರಂ, ಮೈಸೂರು.

THE
MYSORE PRESS
RAMAVILAS ROAD
MYSORE

We undertake to print

JOBS — BOOKS & PERIODICALS

Neat Workmanship

Moderate Charges

Prompt Execution

Colour & artistic work a speciality

Trial order solicited

B. S. MURTHY, B. A
Proprietor.

ಮೈಸೂರ್ ಪ್ರೆಸ್
ರಮಾವಿಲಾಸ ಅಗ್ರಹಾರ
ಮೈಸೂರು.

ನಮ್ಮಲ್ಲಿ ಎಲ್ಲಾ ವಿಧವಾದ ಚಿಕ್ಕ ಪುಟ್ಟ ಮುದ್ರಣ ಕಾರ್ಯವೂ, ಪುಸ್ತಕಗಳೂ, ಮಾಸಪತ್ರಿಕೆಗಳೂ ಸಕಾಲಕ್ಕೆ ಸುಲಭ ದರದಿಂದ ಮಾಡಲ್ಪಡುತ್ತೆ.

☞ ದಯವಿಟ್ಟು ಗಮನಿಸಿ:—
ನಮ್ಮ ಮುದ್ರಣವು ಬಹು ಅಂದ!
ನಮ್ಮ ಅಕ್ಷರವು ಬಲು ಚಂದ!!
ನಮ್ಮ ಕೆಲಸ ನೋಡುವವರಿಗೆ
ನೇತ್ರಾನಂದ

ಬಿ. ಎಸ್. ಮೂರ್ತಿ,
ಪ್ರೊಪ್ರೈಟರ್.

Printed and Published by B.S.Murthy at the Mysore Press, Mysore, for the and Proprietor.